**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 8 ಪಿಒಎಲ್ 83

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 10ನೇ ಫೆಬ್ರವರಿ 1982.

**ಸುತ್ತೋಲೆ**

ವಿಷಯ :- ದಿನಾಂಕ 15ನೇ ಫೆಬ್ರವರಿ 1983ರಿಂದ ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಎಲ್ಲಹಂತದಲ್ಲೂ ತರುವ ಬಗ್ಗೆ.

ಉಲ್ಲೇಖ :- 1. ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979.

2. ಸರ್ಕಾರದ ಅಧಿಕೃತ ಜ್ಞಾಪನ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979

ಕನ್ನಡವನ್ನು ದಿನಾಂಕ 1ನೇ ನವೆಂಬರ್ 1979ರಿಂದ ರಾಜ್ಯದ ಎಲ್ಲ ಆಡಳಿತ ಮಟ್ಟದಲ್ಲೂ ವ್ಯವಹಾರಿಕ ಬಾಷೆಯಾಗಿ ಬಳಸಬೇಕೆಂದು ಅಧಿಕೃತ ಜ್ಞಾಪನ ಕ್ರಮಾಂಕ ಡಿ.ಪಿ.ಎ.ಆರ್1 ಪಿ.ಒ.ಎಲ್ 79, ದಿನಾಂಕ 6ನೇ ಸೆಪ್ಟಂಬರ್ 1979ರಲ್ಲಿ ಆದೇಶಿಸಲಾಗಿದೆ. ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ರಾಜ್ಯ ಸರ್ಕಾರದ ನೀತಿಗನುಗುಣವಾಗಿ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ, ಕನ್ನಡದ ಪ್ರಗತಿಪರ ಬಳಕೆ ಕುರಿತು ಕಾಲ ಕಾಲಕ್ಕೆ ಹಲವಾರು ಸೂಚನೆಗಳನ್ನು ನೀಡಲಾಗಿದೆ.

1. ರಾಜ್ಯಪಾಲರ ಭಾಷಣದಲ್ಲಿ 'ಆಡಳಿತದ ಎಲ್ಲಹಂತಗಳಲ್ಲೂ ಕನ್ನಡಕ್ಕೆ ಅಗ್ರಸ್ಥಾನ ನೀಡಲಾಗುವುದು' ಎಂದು ಘೋಷಿಸಲಾಗಿದೆ. ಈ ಬಗ್ಗೆ ದಿನಾಂಕ 15ನೇ ಫೆಬ್ರವರಿ 1983ರಿಂದ ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಸಚಿವಾಲಯದವರೆಗೆ ರಾಜ್ಯ ಸರ್ಕಾರದ ಎಲ್ಲ ಕಛೇರಿಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ

ಕಟ್ಟುನಿಟ್ಟಾಗಿ ಅತ್ಯಂತ ಯಶಸ್ವಿ ಹಾಗೂ ಔಚಿತ್ಯಪೂರ್ಣವಾಗಿ ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರವು ಈ ಮೂಲಕ ಆದೇಶ ನೀಡುತ್ತದೆ. ಈ ಬಗ್ಗೆ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು ಹಾಗೂ ಅವುಗಳೂ ಕೂಡ ಕನ್ನಡದಲ್ಲಿಯೇ ಇರಬೇಕು.

(ಅ) ಕಡತಗಳ ಮೇಲೆ ಬರೆಯುವ ಟಿಪ್ಪಣಿಗಳು

(ಆ) ಪತ್ರ ವ್ಯವಹಾರ

(ಇ) ಸಭೆಯ ನಡವಳಿಕೆಗಳು

(ಈ) ಪ್ರಕಟಣೆಗಳು, ಫಾರಂಗಳು, ಜಾಹಿರಾತುಗಳು, ನೋಟೀಸುಗಳು, ಲೈಸೆನ್ಸ್‌ಗಳು, ಬಿಲ್ಲುಗಳು, ಸರ್ಟಿಫಿಕೇಟ್‌ಗಳು, ಎಲ್ಲ ಕಾಗದದ ತಲೆಬರಹಗಳು (ಲೆಟರ್‌ಹೆಡ್ಸ್) ಕಛೇರಿ ಹಾಗೂ ಬೀದಿ ಫಲಕಗಳು ಇತ್ಯಾದಿ.

(ಉ) ಲೆಕ್ಕಪತ್ರಗಳು, ರಿಜಿಸ್ಟರ್‌ಗಳು.

(ಊ) ಭಾಷಣಗಳು, ಅವಶ್ಯಕತೆ ಇದ್ದಲ್ಲಿ ಕನ್ನಡದ ಜೊತೆಗೆ (ಆದರೆ ಕನ್ನಡವನ್ನು ಬಿಡದೆ) ಇಂಗ್ಲೀಷನ್ನು ಉಪಯೋಗಿಸಬಹುದು.

2. ಈ ನೀತಿಯನ್ನು ಜಾರಿಗೆ ತರುವಾಗ ಮೊದಲ ಹಂತದಲ್ಲಿ ಕೆಲವು ತೊಂದರೆಗಳು ಉಂಟಾಗುವುದು ಅನಿವಾರ್ಯ. ಉದಾಹರಣೆಗೆ ಕನ್ನಡ ಬೆರಳಚ್ಚು ಯಂತ್ರಗಳು ಹಾಗೂ ಬೆರಳಚ್ಚುಗಾರರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಇರಬಹುದು. ಇಂತಹ ಸಂಧರ್ಭದಲ್ಲಿ ಬಾಲ್ ಪಾಯಿಂಟ್ ಪೆನ್ ಹಾಗೂ ಕಾರ್ಬನ್ ಕಾಗದವನ್ನು ಉಪಯೋಗಿಸಿ ಪತ್ರ ವ್ಯವಹಾರ ಮಾಡಬಹುದು. ತಲೆಬರಹ (ಲೆಟರ್ ಹೆಡ್ಸ್) ನಮೂನೆಗಳು (ಫಾರಮ್ಸ್) ಇನ್ನು ಮುಂದೆ ಕನ್ನಡದಲ್ಲೇ ಅಚ್ಚಾಗುವಂತೆ ನೋಡಿಕೊಳ್ಳಲಾಗುವುದು. ಅಲ್ಲಿಯವರೆಗೆ ಈಗಿರುವ ಕಾಗದದ ತಲೆಬರಹ ಮತ್ತು ನಮೂನೆಗಳ ಮೇಲೆ ಕನ್ನಡದಲ್ಲಿ ತಲೆಬರಹಗಳನ್ನು ಬರೆದು ಉಪಯೋಗಿಸಬಹುದು. ಅನೇಕ ಸಂದರ್ಭಗಳಲ್ಲಿ ಸರಿಯಾದ ಕನ್ನಡ ಪದಗಳು ತೋಚದೇ ಹೋಗಬಹುದು. ಆಗ ಸಾಮಾನ್ಯವಾಗಿ ಬಳಕೆಯಲ್ಲಿರುವ ಇಂಗ್ಲೀಷ್ ಪದಗಳನ್ನು ಕನ್ನಡ ಲಿಪಿಯಲ್ಲಿ ನಿಸ್ಸಂದೇಹವಾಗಿ ಬಳಸಬಹುದು.

3. ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಆಡಳಿತ ಭಾಷೆಯಾಗಿ ಎಲ್ಲ ಸರ್ಕಾರಿ ಪತ್ರ, ವ್ಯವಹಾರದಲ್ಲಿ ಕಡ್ಡಾಯವಾಗಿ ಬಳಸಲು ಸರ್ಕಾರದ ಎಲ್ಲ ಇಲಾಖೆಗಳು, ಸರ್ಕಾರದಿಂದ ರಚಿತವಾಗಿ ಹಾಗೂ ಸರ್ಕಾರದ ಅನುದಾನ, ಧನ ಸಹಾಯ ಪಡೆಯುತ್ತಿರುವ ಎಲ್ಲ ಸ್ವಾಯತ್ತ ಸಂಸ್ಥೆಗಳು, ಎಲ್ಲ ಕಾರ್ಪೊರೇಷನ್ನುಗಳು ಸಹ ಮಹತ್ತರವಾದ ಪ್ರಯತ್ನವನ್ನು ನಡೆಸುವುದರಲ್ಲಿ ಸಕ್ರಿಯ ಪಾತ್ರ ವಹಿಸಬೇಕು. ಆಡಳಿತದ ಎಲ್ಲ ಹಂತದಲ್ಲೂ ಕಡ್ಡಾಯವಾಗಿ ಕನ್ನಡವನ್ನು ಜಾರಿಗೆ ತರಬೇಕೆಂದಿರುವ ಸರ್ಕಾರದ ಘನೋದ್ದೇಶವನ್ನು ಯಶಸ್ವಿಗೊಳಿಸುವಲ್ಲಿ ಎಲ್ಲರೂ ಸರ್ವ

ಪ್ರಯತ್ನಮಾಡಬೇಕೆಂದು ಆಶಿಸಲಾಗಿದೆ.

4. ಸರ್ಕಾರದ ಎಲ್ಲ ಕಾರ್ಯದರ್ಶಿಗಳು ತಮ್ಮ ಆಡಳಿತಕ್ಕೊಳಪಡುವ ಇಲಾಖಾ ಮುಖ್ಯಸ್ಥರಿಗೆ, ಸ್ವಾಯತ್ತ ಸಂಸ್ಥೆಗಳ, ಬೋರ್ಡುಗಳ, ಕಾರ್ಪೊರೇಷನ್, ಸ್ಥಳೀಯ ಸಂಸ್ಥೆಗಳ, ಪುರಸಭೆಗಳ, ಸರ್ಕಾರಿ ಕಾರ್ಖಾನೆಗಳ ಮತ್ತು ನಿಗಮಗಳ ಆಡಳಿತ ವರ್ಗದವರಿಗೆ ಈ ದಿಶೆಯಲ್ಲಿ ಸೂಕ್ತ ಆದೇಶಗಳನ್ನು ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

5. ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿ.ಎ.ಆರ್ 1 ಪಿ.ಒ.ಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979ರಲ್ಲಿ ಆದೇಶ ನೀಡಿರುವಂತೆ ಕೇಂದ್ರ ಸರ್ಕಾರ ಹಾಗೂ ನೆರೆ ರಾಜ್ಯಗಳೊಡನೆ ಪತ್ರ ವ್ಯವಹಾರ ನಡೆಸುವಾಗ ರಾಜ್ಯದ ಗಡಿ ಪ್ರದೇಶಗಳಲ್ಲಿನ ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಎಲ್ಲ ಹಂತಗಳಲ್ಲೂ ಬಳಸಲು ಆದೇಶ ನೀಡಲಾಗಿದೆ.

6. ಕೇಂದ್ರ ಸರ್ಕಾರ ಹಾಗೂ ನೆರೆ ರಾಜ್ಯಗಳೊಡನೆ ವ್ಯವಹರಿಸುವಾಗ ರಾಜ್ಯದ ಗಡಿ ಪ್ರದೇಶಗಳಲ್ಲಿ, ಟೆಲಿಗ್ರಾಂ, ಟೆಲೆಕ್ಸ್ ಕಳುಹಿಸಬೇಕಾದಲ್ಲಿ, ರಾಷ್ಟ್ರೀಯ ಸಭೆಗಳಲ್ಲಿ ಹಾಗೂ ಕ್ಲಿಷ್ಟ ತಾಂತ್ರಿಕ ವಿಷಯಗಳಲ್ಲಿ ಇಂಗ್ಲೀಷನನ್ನು ಬಳಸಬಹುದು.

7. ಈ ಆಜ್ಞೆಯನ್ನು ಜಾರಿಗೆ ತರುವಲ್ಲಿ ಕಂಡುಬರಬಹುದಾದ ನ್ಯೂನತೆಗಳಿಗೆ, ಸಂಬಂಧಪಟ್ಟ ಕಛೇರಿಯ ಹಿರಿಯ ಅಧಿಕಾರಿಯನ್ನು ವೈಯಕ್ತಿವಾಗಿ ಜವಾಬ್ದಾರನನ್ನಾಗಿ ಮಾಡಲಾಗುವುದು.

8. ಈ ಯೋಜನೆಯನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ಅವಶ್ಯಕವಾದ ಎಲ್ಲ ಕ್ರಮಗಳನ್ನು ತಕ್ಷಣದಿಂದಲೇ ಕೈಗೊಳ್ಳಲು ಎಲ್ಲ ಮಟ್ಟದ ಕಛೇರಿಗಳಲ್ಲಿನ ಮುಖ್ಯಸ್ಥರು ಅತ್ಯಂತ ಶ್ರಮ ವಹಿಸತಕ್ಕದ್ದು.

ಸಹಿ/-

**(ರಾ. ಅ. ನಾಯಕ್),**

ಮುಖ್ಯ ಕಾರ್ಯದರ್ಶಿ.